# ‘ಲಿಂಗಾಯತ ಧರ್ಮಕ್ಕೆ ಕಾಯಕಲ್ಪ ಕೊಟ್ಟಿದ್ದ ಹಳಕಟ್ಟಿ’

## ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ- ಶತಮಾನೋತ್ಸವ ಆಚರಣೆಯಲ್ಲಿ ಡಾ.ಎಂ.ಎಸ್.ಮದಭಾವಿ



ಮೈಸೂರು: ಬಸವಣ್ಣನವರ ಕಾಲದಿಂದಲೂ ಜನಮಾನಸದಲ್ಲಿ ಉಳಿಸಿಕೊಂಡು ಬಂದಿರುವ ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡುವ ಮೂಲಕ ಲಿಂಗಾಯತ ಧರ್ಮಕ್ಕೆ ಕಾಯಕಲ್ಪ ಒದಗಿಸಿದ ಕೀರ್ತಿ ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದು ವಿಜಯಪುರದ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ತಿಳಿಸಿದರು.

ನಗರದ ನಟರಾಜ ಸಭಾ ಮಂಟಪದಲ್ಲಿ ಭಾನುವಾರ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆಯಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಯಾರದೋ ಮನೆಯ ಕಪಾಟುಗಳಲ್ಲಿ, ಅಟ್ಟದ ಮೇಲೆ ಮೂಟೆಗಳ ಒಳಗೆ ಅಡಗಿಟ್ಟಿದ್ದ ವಚನಗಳ ಕಟ್ಟುಗಳನ್ನು ಹಳಕಟ್ಟಿಯವರು ಹುಡುಕಿ ಹೊರತೆಗೆದರು. ದೇವರ ಫೋಟೋಗಳ ಜತೆ ಕಟ್ಟುಗಳಿಗೂ ಕುಂಕುಮ ಬಳಿದು ಅವು ಗಳಿಗೂ ಪೂಜೆ ಮಾಡುತ್ತಿದ್ದವರ ಬಳಿ ಗೋಗರೆದು, ಅವರ ಮನವೊಲಿಸಿ ತಾಳೆಗರಿ ಗಳನ್ನು ಸಂಗ್ರಹ ಮಾಡಿದರು. ಹಳಕಟ್ಟಿಯವರ ಈ ಕಾರ್ಯಕ್ಕೂ ಮೊದಲು ಬಸವಣ್ಣ, ಚನ್ನಬಸವಣ್ಣ, ಅಲ್ಲಮ, ಅಕ್ಕ ಮಹಾದೇವಿ, ಅಕ್ಕನಾಗಮ್ಮರಂತಹ ಪ್ರಮುಖ 50 ಮಂದಿ ವಚನಕಾರರು ಮಾತ್ರ ಜನರಿಗೆ ಗೊತ್ತಿದ್ದರು.ಆದರೆ, ಹಳಕಟ್ಟಿಯವರು 250 ವಚನಕಾರರನ್ನು ಗುರುತಿಸಿದರು. ಇವರಲ್ಲಿ 34 ಮಹಿಳಾ ವಚನಕಾರ್ತಿ ಯರು ಬೆಳಕಿಗೆ ಬಂದರು. ಆದ್ದರಿಂದಲೇ 20ನೇ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಕಾಯಕಲ್ಪ ಮಾಡಿದರು ಎನ್ನಬಹುದು ಎಂದರು.

ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಮಹನೀಯರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯಬೇಕು. ಅವರು ಬಿಟ್ಟು ಹೋಗಿರುವ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಾವು ನಡೆದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣ, ಅಲ್ಲಮ ಪ್ರಭುರವರು ಜಗತ್ತಿಗೆ ಮೊದಲು ಪ್ರಜಾಪ್ರಭುತ್ವ ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ ಹಳಕಟ್ಟಿಯವರು ಮಹಾನ್ ವ್ಯಕ್ತಿ ಎಂದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ನೀಲಕಂಠ ಮಠದ ಸಿದ್ಧಮಲ್ಲ ಸ್ವಾಮೀಜಿ, ಕುದೇರು ಮಠದ ಗುರುಶಾಂತ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ.ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್.ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ. ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ, ಮಹಿಳಾ ಘಟಕದ ಅಧ್ಯಕ್ಷರಾದ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ ಕಲಾವಿದ ಎಲ್. ಶಿವಲಿಂಗಪ್ಪ ಮತ್ತಿತರರು ಹಾಜರಿದ್ದರು.

# ‘ಲಿಂಗಾಯತ ಧರ್ಮಕ್ಕೆ ಕಾಯಕಲ್ಪ ಕೊಟ್ಟಿದ್ದ ಹಳಕಟ್ಟಿ’

## ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ- ಶತಮಾನೋತ್ಸವ ಆಚರಣೆಯಲ್ಲಿ ಡಾ.ಎಂ.ಎಸ್.ಮದಭಾವಿ



ಮೈಸೂರು: ಬಸವಣ್ಣನವರ ಕಾಲದಿಂದಲೂ ಜನಮಾನಸದಲ್ಲಿ ಉಳಿಸಿಕೊಂಡು ಬಂದಿರುವ ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡುವ ಮೂಲಕ ಲಿಂಗಾಯತ ಧರ್ಮಕ್ಕೆ ಕಾಯಕಲ್ಪ ಒದಗಿಸಿದ ಕೀರ್ತಿ ಫ.ಗು.ಹಳಕಟ್ಟಿ ಅವರಿಗೆ ಸಲ್ಲುತ್ತದೆ ಎಂದು ವಿಜಯಪುರದ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ತಿಳಿಸಿದರು.

ನಗರದ ನಟರಾಜ ಸಭಾ ಮಂಟಪದಲ್ಲಿ ಭಾನುವಾರ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆಯಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಯಾರದೋ ಮನೆಯ ಕಪಾಟುಗಳಲ್ಲಿ, ಅಟ್ಟದ ಮೇಲೆ ಮೂಟೆಗಳ ಒಳಗೆ ಅಡಗಿಟ್ಟಿದ್ದ ವಚನಗಳ ಕಟ್ಟುಗಳನ್ನು ಹಳಕಟ್ಟಿಯವರು ಹುಡುಕಿ ಹೊರತೆಗೆದರು. ದೇವರ ಫೋಟೋಗಳ ಜತೆ ಕಟ್ಟುಗಳಿಗೂ ಕುಂಕುಮ ಬಳಿದು ಅವು ಗಳಿಗೂ ಪೂಜೆ ಮಾಡುತ್ತಿದ್ದವರ ಬಳಿ ಗೋಗರೆದು, ಅವರ ಮನವೊಲಿಸಿ ತಾಳೆಗರಿ ಗಳನ್ನು ಸಂಗ್ರಹ ಮಾಡಿದರು. ಹಳಕಟ್ಟಿಯವರ ಈ ಕಾರ್ಯಕ್ಕೂ ಮೊದಲು ಬಸವಣ್ಣ, ಚನ್ನಬಸವಣ್ಣ, ಅಲ್ಲಮ, ಅಕ್ಕ ಮಹಾದೇವಿ, ಅಕ್ಕನಾಗಮ್ಮರಂತಹ ಪ್ರಮುಖ 50 ಮಂದಿ ವಚನಕಾರರು ಮಾತ್ರ ಜನರಿಗೆ ಗೊತ್ತಿದ್ದರು.ಆದರೆ, ಹಳಕಟ್ಟಿಯವರು 250 ವಚನಕಾರರನ್ನು ಗುರುತಿಸಿದರು. ಇವರಲ್ಲಿ 34 ಮಹಿಳಾ ವಚನಕಾರ್ತಿ ಯರು ಬೆಳಕಿಗೆ ಬಂದರು. ಆದ್ದರಿಂದಲೇ 20ನೇ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಕಾಯಕಲ್ಪ ಮಾಡಿದರು ಎನ್ನಬಹುದು ಎಂದರು.

ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಮಹನೀಯರು ಹಾಕಿ ಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯಬೇಕು. ಅವರು ಬಿಟ್ಟು ಹೋಗಿರುವ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಾವು ನಡೆದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣ, ಅಲ್ಲಮ ಪ್ರಭುರವರು ಜಗತ್ತಿಗೆ ಮೊದಲು ಪ್ರಜಾಪ್ರಭುತ್ವ ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ ಹಳಕಟ್ಟಿಯವರು ಮಹಾನ್ ವ್ಯಕ್ತಿ ಎಂದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ನೀಲಕಂಠ ಮಠದ ಸಿದ್ದಮಲ್ಲ ಸ್ವಾಮೀಜಿ, ಕುದೇರು ಮಠದ ಗುರುಶಾಂತ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ.ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ. ಎಸ್.ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ. ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ, ಮಹಿಳಾ ಘಟಕದ ಅಧ್ಯಕ್ಷರಾದ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ ಕಲಾವಿದ ಎಲ್. ಶಿವಲಿಂಗಪ್ಪ ಮತ್ತಿತರರು ಹಾಜರಿದ್ದರು.

ಬೆಂಗಳೂರು
ಬೆರಳ ತುದಿಯಲ್ಲೇ ಜಗತ್ತು
ವಾಟ್ಸ್‌ಆ್ಯಪ್ ಮಾಡಿ 8310152292

# ವಚನ ಸಾಹಿತ್ಯ ಸಂರಕ್ಷಿಸಿದ ಫ.ಗು.ಹಳಕಟ್ಟಿ

## ವಿಜಯಪುರದ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ಅಭಿಪ್ರಾಯ

■ **ಉದಯವಾಣಿ ಸಮಾಚಾರ**

**ಮೈಸೂರು:** ವಚನ ಸಾಹಿತ್ಯವನ್ನು ಸಂರಕ್ಷಣೆ ಮಾಡುವ ಮೂಲಕ ಲಿಂಗಾಯತ ಧರ್ಮಕ್ಕೆ ಕಾಯಕಲ್ಪ ಒದಗಿಸಿದ ಕೀರ್ತಿ ಫ.ಗು.ಹಳಕಟ್ಟಿಯವರಿಗೆ ಸಲ್ಲುತ್ತದೆ ಎಂದು ವಿಜಯಪುರದ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ಅಭಿಪ್ರಾಯಪಟ್ಟರು.

ನಗರದ ನಟರಾಜ ಸಭಾಮಂಟಪದಲ್ಲಿ ಭಾನುವಾರ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದಿಂದ ಏರ್ಪಡಿಸಲಾಗಿದ್ದ ಡಾ.ಫ.ಗು. ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

**ತಾಳೆಗರಿಗಳ ಸಂಗ್ರಹ:** ಯಾರದೋ ಮನೆಯ ಕಪಾಟುಗಳಲ್ಲಿ, ಅಟ್ಟದ ಮೇಲೆ ಮೂಟೆಗಳ ಒಳಗೆ ಅಡಗಿ ಕುಳಿತ್ತಿದ್ದ ವಚನಗಳ ಕಟ್ಟುಗಳನ್ನು ಹಳಕಟ್ಟಿಯವರು ಹುಡುಕಿ ಹೊರತೆಗೆದರು. ದೇವರ ಫೋಟೋಗಳ ಜತೆ ಕಟ್ಟುಗಳಿಗೂ ಕುಂಕುಮ ಬಳಿದು ಅವುಗಳಿಗೂ ಪೂಜೆ ಮಾಡುತ್ತಿದವರ ಬಳಿ ಗೋಗರೆದು, ಅವರ ಮನವೊಲಿಸಿ ತಾಳೆಗರಿಗಳನ್ನು ಸಂಗ್ರಹ ಮಾಡಿದರು.

ಹಳಕಟ್ಟಿಯವರ ಈ ಕಾರ್ಯಕ್ಕೂ ಮೊದಲು ಬಸವಣ್ಣ, ಚೆನ್ನಬಸವಣ್ಣ, ಅಲ್ಲಮ, ಅಕ್ಕಮಹಾದೇವಿ, ಅಕ್ಕನಾಗಮ್ಮ ನಂತಹ ಪ್ರಮುಖ 50 ಮಂದಿ ವಚನಕಾರರು ಮಾತ್ರ ಜನರಿಗೆ ಗೊತ್ತಿದ್ದರು.ಆದರೆ ಹಳಕಟ್ಟಿಯವರು 250 ವಚನಕಾರರನ್ನು ಗುರುತಿಸಿದರು. ಇವರಲ್ಲಿ 34 ಮಹಿಳಾ ವಚನಕಾರ್ತಿಯರು ಬೆಳಕಿಗೆ ಬಂದರು. ಆದ್ದರಿಂದಲೇ 20ನೇ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಕಾಯಕಲ್ಪ ಮಾಡಿದರು ಎನ್ನಬಹುದು ಎಂದರು.

**'ವಚನಶಾಸ್ತ್ರ ಸಾರ-1' ಮುದ್ರಣ:** ಕಲ್ಯಾಣದ ಕ್ರಾಂತಿಯ ನಂತರ ನೂರೊಂದು ವಿರಕ್ತರು ವಚನಗಳನ್ನು ಸಂಗ್ರಹ ಮಾಡಿ ಶೂನ್ಯ ಸಂಪಾದನೆ ಎನ್ನುವ ಶೀರ್ಷಿಕೆಯಲ್ಲಿ ಬರೆದು ಇಟ್ಟಿದ್ದರು. ಹಳಕಟ್ಟಿಯವರು ಇಂತಹ ತಾಳೆಗರಿಗಳನ್ನು ಹುಡುಕಿ ಅವುಗಳನ್ನು ಸಂಗ್ರಹ ಮಾಡಿದ್ದೂ ಮಾತ್ರವಲ್ಲದೇ ಜನರಿಗೆ ತಲುಪಿಸಲು ಅಚ್ಚು ಹಾಕಿಸಲು ಪ್ರಯತ್ನಿಸಿದರು. ಪ್ರಭುದೇವರ ಷಟ್ಸ್ಥಲ ವಚನಗಳು, ರತ್ನಮಾಲ ವರ್ಣಯಂತಹ ಶ್ರೇಷ್ಠ ಕೃತಿಗಳು ಜನರಿಗೂ ಮುಟ್ಟಬೇಕು ಎಂದು ಮಂಗಳೂರಿನ ಬಾಸೆಲ್ ಮಿಷನ್‌ಗೆ 'ವಚನಶಾಸ್ತ್ರ ಸಾರ-1' ಮುದ್ರಣ ಮಾಡಿಕೊಡಲು ನೀಡಿದರು.

ಆದರೆ ಬಾಸೆಲ್ ಮಿಷನ್‌ನವರು ಮುದ್ರಣ ಮಾಡಿಕೊಡಲು ಒಪ್ಪಲಿಲ್ಲ, ಆದರೂ ಹಠಬಿಡದೇ ಹಳಕಟ್ಟಿಯವರು ತಮ್ಮ ಮನೆಯನ್ನು ಮಾರಿ ಮುದ್ರಣ ಯಂತ್ರವನ್ನು ಖರೀದಿಸಿ ತಂದು ವಿಜಯಪುರದಲ್ಲೇ ಸ್ಥಳೀಯರ ಮುದ್ರಣ ಘಟಕದಲ್ಲಿ ಸ್ಥಾಪನೆ ಮಾಡಿ ತಾವೇ ಕೈಯಾರ ಅಚ್ಚು ಹಾಕಿದರು. ಅವರು ತಮ್ಮ ಜೀವಿತಾವಧಿಯಲ್ಲಿ 165 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರು 35 ವರ್ಷಗಳ ಕಾಲ ಹೊರತಂದ 'ಶಿವಾನುಭವ' ಪತ್ರಿಕೆ ವಚನ ಸಾಹಿತ್ಯ ವಿದ್ಯಾರ್ಥಿಗಳಿಗೆ ಆಕರವಾಗುವಷ್ಟು ಶ್ರೇಷ್ಠತೆಯನ್ನು ಪಡೆದಿದೆ ಎಂದು ಬಣ್ಣಿಸಿದರು.



ಮೈಸೂರಿನಲ್ಲಿ ನಡೆದ ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಡಾ.ಫ.ಗು.ಹಳಕಟ್ಟಿ ಅವರ ಭಾವಚಿತ್ರಕ್ಕೆ ಬಸವರಾಜಹೊರಟ್ಟಿ ಪುಷ್ಪಾರ್ಚನೆ ಮಾಡಿದರು.

- ಮಹನೀಯರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯಬೇಕು.
- 'ಶಿವಾನುಭವ' ಪತ್ರಿಕೆ ವಚನ ಸಾಹಿತ್ಯ ವಿದ್ಯಾರ್ಥಿಗಳಿಗೆ ಆಕರವಾಗುವಷ್ಟು ಶ್ರೇಷ್ಠತೆ ಪಡೆದಿದೆ

### ಮಹನೀಯರ ಹಾದಿಯಲ್ಲಿ ನಡೆಯೋಣ: ಹೊರಟ್ಟಿ

ಮೇಲ್ಮನೆ ಸಭಾಪತಿ ಬಸವರಾಜಹೊರಟ್ಟಿ ಮಾತನಾಡಿ, ಮಹನೀಯರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯಬೇಕು. ಅವರು ಬಿಟ್ಟುಹೋಗಿರುವ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಾವು ನಡೆದಾಗ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಬಸವಣ್ಣ, ಅಲ್ಲಮ ಪ್ರಭು ಅವರು ಜಗತ್ತಿಗೆ ಮೊದಲ ಪ್ರಜಾಪ್ರಭುತ್ವ ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ ಹಳಕಟ್ಟಿಯವರು ಮಹಾನ್ ವ್ಯಕ್ತಿ ಎಂದರು. ಶೇ.95ರಷ್ಟು ಅನಕ್ಷರಸ್ಥರೇ ತುಂಬಿದ ವಿಜಯಪುರ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ, ಮನೆ-ಮನೆಗಳಿಗೆ ಹೋಗಿ ಪೋಷಕರನ್ನು ಮನವೊಲಿಸಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬಂದು ಅವರಿಗೆ ಶಿಕ್ಷಣ ನೀಡಿದ ಹಳಕಟ್ಟಿಯವರು ಸಿದ್ದೇಶ್ವರ ಬ್ಯಾಂಕ್ ಸ್ಥಾಪನೆ ಮಾಡಿ ಬಡವರಿಗೆ, ರೈತರಿಗೆ ಸಾಲ ಕೊಡುವ ಪದ್ಧತಿಯನ್ನು ಶುರು ಮಾಡಿದರು. ಅಂತಹವರ ವಿಚಾರಗಳು ಮುಂದಿನ ಜನಾಂಗಕ್ಕೆ ತಲುಪಬೇಕಾದರೇ ಈಗಿನ ಪೀಳಿಗೆಯವರು ಅವರ ಆದರ್ಶಗಳನ್ನು ರೂಢಿಸಿಕೊಳ್ಳಬೇಕು ಎಂದರು.

### ಅಕ್ಷರ ರೂಪದಲ್ಲಿ ವಚನಗಳ ಪ್ರಕಟಿಸಿದ ಹಳಕಟ್ಟಿ

ಹಳಕಟ್ಟಿಯವರು ವಚನಗಳನ್ನು ಬರೆಯಲಿಲ್ಲ, ಕಿವಿಯಲ್ಲಿ ಕೇಳಿಸಿಕೊಂಡರು, ಅಕ್ಷರ ರೂಪದಲ್ಲಿ ಪ್ರಕಟಿಸಿದರು. ಆದ್ದರಿಂದ ವಚನಪಿತಾಮಹ ಎನಿಸಿಕೊಂಡರು. ಸಾಧನೆಯೇ ಅವರ ಜೀವನವಾಗಿತ್ತು ಎಂದು ಅವರ ಜೀವನ ಸಾಧನೆಯನ್ನು ಕೇವಲ ಒಂದೇ ವಾಕ್ಯದಲ್ಲಿ ವರ್ಣಿಸಬಹುದು.ವೈಭವಯುತವಾಗಿ ಜೀವನ ಸಾಗಿಸಲು ಇದ್ದ ಅವಕಾಶಗಳನ್ನೆಲ್ಲ ಬಿಟ್ಟು ವಚನಗಳ ಹಿಂದೇಯೆ ಓಡಾಡಿದ ಅವರು 20ನೇ ಶತಮಾನದ ಬಸವಣ್ಣ, 12ನೇ ಶತಮಾನದಲ್ಲಿ ಇದ್ದ ಬಸವಣ್ಣನ ಸಾಧನೆ-ಚರಿತ್ರೆಯನ್ನು ನಾವು ಕೇಳಿದ್ದೇವೆ. ಆದರೆ ನೋಡಲು ಆಗಿಲ್ಲ, ಆದ್ದರಿಂದ ಹಳಕಟ್ಟಿಯವರ ಬದುಕನ್ನು ನೋಡಿದರೇ ಸಾಕು ಬಸವಣ್ಣನನ್ನು ಕಂಡತೆ ಆಗುತ್ತದೆ ಎಂದು ಡಾ.ಎಂ.ಎಸ್.ಮದಭಾವಿ ತಿಳಿಸಿದರು.

ಹೊಸಮಠದ ಚಿದಾನಂದ ಸ್ವಾಮೀಜಿ, ನೀಲಕಂಠಮಠದ ಸಿದ್ದಮಲ್ಲಸ್ವಾಮೀಜಿ, ಕುದೇರು ಮಠದ ಗುರುಶಾಂತಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ಶಸಾಪ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ.ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್. ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ.ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ ,ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ, ಕಲಾವಿದ ಎಲ್.ಶಿವಲಿಂಗಪ್ಪ ಮತ್ತಿತರರು ಹಾಜರಿದ್ದರು.

# ಸಮಾನತೆಗೆ ಶ್ರಮಿಸಿದ್ದ ಫ.ಗು.ಹಳಕಟ್ಟಿ

## ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ



ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದಿಂದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಡಾ.ಫ.ಗು.ಹಳಕಟ್ಟಿ ಹಾಗೂ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

■ **ವಿಕ ಸುದ್ದಿಲೋಕ** ಮೈಸೂರು

ಶಿಕ್ಷಣ, ಸಮಾನತೆ ಜಾರಿಗಾಗಿ ಫ.ಗು.ಹಳಕಟ್ಟಿ ಶ್ರಮಿಸಿದ್ದರು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಟರಾಜ ಸಭಾಮಂಟಪದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ-ಶತಮಾನೋತ್ಸವ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

''ಬಸವಣ್ಣ, ಅಲ್ಲಮ ಪ್ರಭು ಅವರು ಜಗತ್ತಿಗೆ ಮೊದಲ ಪ್ರಜಾಪ್ರಭುತ್ವ ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ್ದ ಫ.ಗು.ಹಳಕಟ್ಟಿ ಅವರು ಮಹಾನ್ ವ್ಯಕ್ತಿ,'' ಎಂದು ತಿಳಿಸಿದರು.

''ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಬಾಲ್ಯದಲ್ಲಿ ವಾಸವಿದ್ದ ಧಾರವಾಡದ ಮನೆಯನ್ನು ಸ್ಮಾರಕವನ್ನಾಗಿ ರೂಪಿಸಲು ಚಿಂತನೆ ನಡೆಸಲಾಗಿದೆ. ಅವರ ಮನೆಯ ಸಮೀಪವಿರುವ ವೃತ್ತಕ್ಕೆ ಅವರ ಹೆಸರನ್ನು ನಾಮಕರಣ ಮಾಡಬೇಕು ಹಾಗೂ ಕಂಚಿನ ಮೂರ್ತಿ ಸ್ಥಾಪನೆ ಮಾಡಬೇಕು ಎನ್ನುವ ಚಿಂತನೆ ಇದೆ. ಸ್ಮಾರಕ ನಿರ್ಮಾಣ ಮಾಡಲು ಎಲ್ಲರ ಸಹಕಾರವೂ ಮುಖ್ಯವಾಗಿದೆ,'' ಎಂದು ತಿಳಿಸಿದರು.

**ಒಳ ಪಂಗಡಗಳು ಒಂದಾಗಬೇಕು:** ''ಲಿಂಗಾಯತರಲ್ಲಿ ಇರುವ ಒಳಪಂಗಡಗಳು ಇವ ನಮ್ಮವ ಎನ್ನುವ ಬಸವಣ್ಣನ ವಚನವನ್ನು ಪಾಲನೆ ಮಾಡಿ ಎಲ್ಲರೂ ಒಂದಾಗಬೇಕು. ತನ್ಮೂಲಕ ಅಣ್ಣ ಹುಟ್ಟುಹಾಕಿದ ಸಮಾನತೆಯನ್ನು ರಾಷ್ಟ್ರವ್ಯಾಪಿಗೊಳಿಸಬೇಕು,'' ಎಂದರು.

ವಿಜಯಪುರದ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ಮಾತನಾಡಿ, ''ಬಸವಣ್ಣ, ಚನ್ನಬಸವಣ್ಣ, ಅಲ್ಲಮ, ಅಕ್ಕ ಮಹಾದೇವಿ, ಅಕ್ಕನಾಗಮ್ಮನಂತಹ ಪ್ರಮುಖ 50 ಮಂದಿ ವಚನಕಾರರು ಮಾತ್ರ ಜನರಿಗೆ ಗೊತ್ತಿದ್ದರು. ಆದರೆ, ಫ.ಗು.ಹಳಕಟ್ಟಿಯವರು 250 ವಚನಕಾರರನ್ನು ಗುರುತಿಸಿದರು. ಇವರಲ್ಲಿ 34 ಮಹಿಳಾ ವಚನಗಾರ್ತಿಯರು ಬೆಳಕಿಗೆ ಬಂದರು,'' ಎಂದರು.

ಹೊಸಮಠದ ಚಿದಾನಂದ ಸ್ವಾಮೀಜಿ, ನೀಲಕಂಠಮಠದ ಸಿದ್ದಮಲ್ಲ ಸ್ವಾಮೀಜಿ, ಕುದೇರು ಮಠದ ಗುರುಶಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ. ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್.ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ. ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ, ಕಲಾವಿದ ಎಲ್.ಶಿವಲಿಂಗಪ್ಪ ಇದ್ದರು.

# ಸಮಾನತೆಗೆ ಶ್ರಮಿಸಿದ್ದ ಫ.ಗು.ಹಳಕಟ್ಟಿ

## ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ



ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದಿಂದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಡಾ.ಫ.ಗು.ಹಳಕಟ್ಟಿ ಹಾಗೂ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

■ **ವಿಕ ಸುದ್ದಿಲೋಕ** ಮೈಸೂರು

ಶಿಕ್ಷಣ, ಸಮಾನತೆ ಜಾರಿಗಾಗಿ ಫ.ಗು.ಹಳಕಟ್ಟಿ ಶ್ರಮಿಸಿದ್ದರು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಟರಾಜ ಸಭಾಮಂಟಪದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

''ಬಸವಣ್ಣ, ಅಲ್ಲಮ ಪ್ರಭು ಅವರು ಜಗತ್ತಿಗೆ ಮೊದಲ ಪ್ರಜಾಪ್ರಭುತ್ವ ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ್ದ ಫ.ಗು.ಹಳಕಟ್ಟಿ ಅವರು ಮಹಾನ್ ವ್ಯಕ್ತಿ,'' ಎಂದು ತಿಳಿಸಿದರು.

''ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಬಾಲ್ಯದಲ್ಲಿ ವಾಸವಿದ್ದ ಧಾರವಾಡದ ಮನೆಯನ್ನು ಸ್ಮಾರಕವನ್ನಾಗಿ ರೂಪಿಸಲು ಚಿಂತನೆ ನಡೆಸಲಾಗಿದೆ. ಅವರ ಮನೆಯ ಸಮೀಪವಿರುವ ವೃತ್ತಕ್ಕೆ ಅವರ ಹೆಸರನ್ನು ನಾಮಕರಣ ಮಾಡಬೇಕು ಹಾಗೂ ಕಂಚಿನ ಮೂರ್ತಿ ಸ್ಥಾಪನೆ ಮಾಡಬೇಕು ಎನ್ನುವ ಚಿಂತನೆ ಇದೆ. ಸ್ಮಾರಕ ನಿರ್ಮಾಣ ಮಾಡಲು ಎಲ್ಲರ ಸಹಕಾರವೂ ಮುಖ್ಯವಾಗಿದೆ,'' ಎಂದು ತಿಳಿಸಿದರು.

**ಒಳ ಪಂಗಡಗಳು ಒಂದಾಗಬೇಕು:** ''ಲಿಂಗಾಯತರಲ್ಲಿ ಇರುವ ಒಳಪಂಗಡಗಳು ಇವ ನಮ್ಮವ ಎನ್ನುವ ಬಸವಣ್ಣನ ವಚನವನ್ನು ಪಾಲನೆ ಮಾಡಿ ಎಲ್ಲರೂ ಒಂದಾಗಬೇಕು. ತನ್ಮೂಲಕ ಅಣ್ಣಾ ಹುಟ್ಟುಹಾಕಿದ ಸಮಾನತೆಯನ್ನು ರಾಷ್ಟ್ರವ್ಯಾಪಿಗೊಳಿಸಬೇಕು,'' ಎಂದರು.

ವಿಜಯಪುರದ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ (ಡಾ.ಎಂ.ಎಸ್.ಮದಭಾವಿ ಮಾತನಾಡಿ, ''ಬಸವಣ್ಣ, ಚನ್ನಬಸವಣ್ಣ, ಅಲ್ಲಮ, ಅಕ್ಕ ಮಹಾದೇವಿ, ಅಕ್ಕನಾಗಮ್ಮನಂತಹ ಪ್ರಮುಖ 50 ಮಂದಿ ವಚನಕಾರರು ಮಾತ್ರ ಜನರಿಗೆ ಗೊತ್ತಿದ್ದರು. ಆದರೆ, ಫ.ಗು.ಹಳಕಟ್ಟಿಯವರು 250 ವಚನಕಾರರನ್ನು ಗುರುತಿಸಿದರು. ಇವರಲ್ಲಿ 34 ಮಹಿಳಾ ವಚನಗಾರ್ತಿಯರು ಬೆಳಕಿಗೆ ಬಂದರು,'' ಎಂದರು.

ಹೊಸಮಠದ ಚಿದಾನಂದ ಸ್ವಾಮೀಜಿ, ನೀಲಕಂಠಮಠದ ಸಿದ್ದಮಲ್ಲ ಸ್ವಾಮೀಜಿ, ಕುದೇರು ಮಠದ ಗುರುಶಾಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ. ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್.ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ. ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ, ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ, ಕಲಾವಿದ ಎಲ್.ಶಿವಲಿಂಗಪ್ಪ ಇದ್ದರು.

# ಬಸವಣ್ಣ, ಅಲ್ಲಮ ಪ್ರಭು ಮಾರ್ಗದಲ್ಲಿ ಸಾಗಿದ ಹಳಕಟ್ಟಿ ಮಹಾನ್ ವ್ಯಕ್ತಿ

## ಡಾ.ಫ.ಗು.ಹಳಕಟ್ಟಿ ಜಯಂತಿಯಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬಣ್ಣನೆ

ಮೈಸೂರು, ಜು.14(ಜಿಎ)–ಬಸವಣ್ಣ ಮತ್ತು ಅಲ್ಲಮ ಪ್ರಭು ಅವರು ಜಗತ್ತಿಗೆ ಮೊದಲ ಪ್ರಜಾಪ್ರಭುತ್ವವನ್ನು ಪರಿಚಯಿಸಿದರು. ಅವರ ಮಾರ್ಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ, ಶಿಕ್ಷಣ, ಸಮಾನತೆಯನ್ನು ಸಮಾಜದಲ್ಲಿ ಜಾರಿಗೆ ತರಲು ಶ್ರಮಿಸಿದ ಫ.ಗು.ಹಳಕಟ್ಟಿಯವರು ಮಹಾನ್ ವ್ಯಕ್ತಿ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ನಟರಾಜ ಸಭಾ ಮಂಟಪದಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಭಾನುವಾರ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಿಸಲಾಯಿತು.

ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಟರಾಜ ಸಭಾ ಮಂಟಪದಲ್ಲಿ ಏರ್ಪಡಿಸಿದ್ದ ಡಾ.ಫ.ಗು.ಹಳಕಟ್ಟಿ ಜಯಂತಿ ಮತ್ತು ವಚನ ಸಾಹಿತ್ಯ ಸಂರಕ್ಷಣೆ–ಶತಮಾನೋತ್ಸವ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣ, ಸಮಾನತೆ ಜಾರಿಗಾಗಿ ಫ.ಗು.ಹಳಕಟ್ಟಿಯವರು ಸಾಕಷ್ಟು ಶ್ರಮಿಸಿದ್ದಾರೆ ಎಂದರು.

ಶೇ.95ರಷ್ಟು ಅನಕ್ಷರಸ್ಥರೇ ತುಂಬಿದ ವಿಜಯಪುರ ಜಿಲ್ಲೆಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಮನೆ–ಮನೆಗಳಿಗೆ ಹೋಗಿ ಪೋಷಕರ ಮನವೊಲಿಸಿ ಹೆಣ್ಣು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬಂದು ಅವರಿಗೆ ಶಿಕ್ಷಣ ನೀಡಿದ ಹಳಕಟ್ಟಿಯವರು ಸಿದ್ದೇಶ್ವರ ಬ್ಯಾಂಕ್ ಸ್ಥಾಪನೆ ಮಾಡಿ ಬಡವರಿಗೆ, ರೈತರಿಗೆ ಸಾಲ ಕೊಡುವ ಪದ್ಧತಿಯನ್ನು ಶುರು ಮಾಡಿದರು. ಅಂತಹವರ ವಿಚಾರಗಳು ಮುಂದಿನ ಜನಾಂಗಕ್ಕೆ ತಲುಪಬೇಕಾದರೇ ಈಗಿನ ಪೀಳಿಗೆಯವರು ಅವರ ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಚನ ಪಿತಾಮಹ ಹಳಕಟ್ಟಿಯವರು, ಬಾಲ್ಯದಲ್ಲಿ ವಾಸವಿದ್ದ ಧಾರವಾಡದ ಮನೆಯನ್ನು ಸ್ಮಾರಕವನ್ನಾಗಿ ರೂಪಿಸಲು ಚಿಂತನೆ ನಡೆಸಲಾಗಿದೆ. ಕಂಚಿನ ಮೂರ್ತಿಯನ್ನು ಸ್ಥಾಪನೆ ಮಾಡಬೇಕು ಎನ್ನುವ ಚಿಂತನೆಯನ್ನು ನಾವು ನಾಲ್ಕರು ಮಂದಿ ಜೊತೆಗೂಡಿ ಆಲೋಚನೆ ಮಾಡಿದ್ದೇವೆ. ಸ್ಮಾರಕ ನಿರ್ಮಾಣ ಮಾಡಲು ಎಲ್ಲರ ಸಹಕಾರವೂ ಮುಖ್ಯವಾಗಿದೆ ಎಂದು ತಿಳಿಸಿದರು.

ಲಿಂಗಾಯತರಲ್ಲಿ ಇರುವ ಒಳಪಂಗಡಗಳು ಇವ ನಮ್ಮವ ಎನ್ನುವ, ಇವ ನಮ್ಮವ ಬಸವಣ್ಣನ ವಚನವನ್ನು ಪಾಲನೆ ಮಾಡಿ, ಎಲ್ಲರೂ ಒಂದಾಗಬೇಕು. ತನ್ಮೂಲಕ ಅಣ್ಣ ಹುಟ್ಟು ಹಾಕಿದ ಸಮಾನತೆಯನ್ನು ರಾಷ್ಟ್ರವ್ಯಾಪಿಗೊಳಿಸಬೇಕು. ನಿಜಲಿಂಗಪ್ಪನವರ ಕಾಲದಲ್ಲಿ 103 ಶಾಸಕರು ಆರಿಸಿ ಬರುತ್ತಿದ್ದರು. ಆಗ ಒಳಪಂಗಡಗಳ ಬಗ್ಗೆ ಯಾರು ಅಷ್ಟಾಗಿ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗಿನ ಪರಿಸ್ಥಿತಿ ನೋಡಿದರೇ ಗಂಭೀರವಾಗಿ ಆಲೋಚನೆ ಮಾಡಬೇಕಾಗಿದೆ ಎಂದರು.

ಒಳಪಂಗಡಗಳಿಗೆ ಒಂದೊಂದು ಪ್ರವರ್ಗಗಳಲ್ಲಿ ಮೀಸಲಾತಿಯನ್ನು ಕೇಳುವುದರಿಂದ ನಮ್ಮಲ್ಲಿನ ಒಗ್ಗಟ್ಟು ಒಡೆದು ಹೋಗುತ್ತಿದೆ. ನಾವೆಲ್ಲರು ಒಂದೇ ಎಂಬ ಭಾವನೆಯಿಂದ ನಮ್ಮಲ್ಲಿನ ಮಕ್ಕಳನ್ನು ಎಲ್ಲರೂ ಗುರುತಿಸಿ, ಪ್ರೋತ್ಸಾಹಿಸಿ ಅವರನ್ನು ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಹೋಗುವಂತೆ ಮಾಡಬೇಕು. ಮಹಿಳೆಯರನ್ನು ಸಬಲೀಕರಣ ಮಾಡಬೇಕು. ಜಾತಿಯ ಎಲ್ಲೆಯನ್ನು ಮೀರಿ ಕಾಯಕವೇ ಕೈಲಾಸವೆನ್ನುವ ತತ್ವದಂತೆ ಎಲ್ಲರೂ ದುಡಿದು, ಹಂಚಿ ತಿನ್ನುವುದನ್ನು ರೂಢಿಸಿಕೊಂಡು ಸಮಾಜವನ್ನು ಒಗಟ್ಟುಗೊಳಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೊಸಮಠದ ಚಿದಾನಂದ ಸ್ವಾಮೀಜಿ, ನೀಲಕಂಠ ಮಠದ ಸಿದ್ದಮಲ್ಲಸ್ವಾಮೀಜಿ, ಕುದೇರು ಮಠದ ಗುರುಶಾಂತಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ, ಡಾ.ಫಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಮದಭಾವಿ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ.ವಸಂತಕುಮಾರ್, ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಎಸ್. ಗುರುಪಾದಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಚ್.ಟಿ. ಮಲ್ಲಿಕಾರ್ಜುನ, ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಮಹಾದೇವಪ್ಪ ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ ರೇಚಣ್ಣ, ಕಾರ್ಯದರ್ಶಿ ಬಿ.ಎಂ.ಮರಪ್ಪ, ಕಲಾವಿದ ಶಿವಲಿಂಗಪ್ಪ ಉಪಸ್ಥಿತರಿದ್ದರು.